ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ



# ಕಿನಕಳ್ಳಿಯಲ್ಲಿ ಮನೆ ಮನೆಗೆ ಗಂಗೆ ಯನ್ನು ಹರಿಸಿದ ನಳಿನಾ

ಗ್ರಾಮೀಣ ಜನತೆಗೆ ಶುದ್ಧ, ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವ ಮೂಲಕ ಜನರ ಮೂಲಭೂತ ಅವಶ್ಯಕತೆಯನ್ನು ಪೂರೈಸಿ ಜನರ ಜೀವನ ಮಟ್ಟವನ್ನು ಸುಧಾರಿಸುವುದು ಜಲ ಜೀವನ್ ಮಿಷನ್ ಉದ್ದೇಶವಾಗಿದೆ.

ಜಲ ಜೀವನ್ ಮಿಷನ್ ಯಶಸ್ವಿಯಾಗಬೇಕೆಂದರೆ ಸಮುದಾಯದ ಪಾತ್ರ ಮತ್ತು ಗ್ರಾಮ ಪಂಚಾಯಿತಿಯ ಪಾತ್ರ ಬಹಳ ಮುಖ್ಯವಾಗಿದೆ. ಗ್ರಾಮ ಪಂಚಾಯಿತಿ ಸದಸ್ಯರು ತಮ್ಮನ್ನು ಯೋಜನೆಗಳಲ್ಲಿ ತೊಡಗಿಸಿಕೊಂಡಾಗ ಯೋಜನೆಗಳು ಜನರನ್ನು ತಲುಪಲು ಸಾಧ್ಯ. ಹೀಗೆ ಕಿನಕಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೀರಿನ ಸಮಸ್ಯೆಗೆ ಪರಿಹಾರವಾದ ಜಲ ಜೀವನ್ ಮಿಷನ್ ಜೊತೆಗೆ ನಿಂತಿದ್ದು ಗ್ರಾಮ ಪಂಚಾಯಿತಿ ಸದಸ್ಯೆ ನಳಿನಾ.

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನಲ್ಲಿರುವ ಕಿನಕಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 369 ಮನೆಗಳಿದ್ದು, 1,634 ಮಂದಿ ವಾಸಿಸುತ್ತಿದ್ದಾರೆ. ಇದು ಯಳಂದೂರಿನಿಂದ (ತಹಸೀಲ್ದಾರ್ ಕಚೇರಿ) 10 ಕಿಮೀ ದೂರದಲ್ಲಿದೆ ಮತ್ತು ಜಿಲ್ಲಾ ಕೇಂದ್ರದಿಂದ 30 ಕಿಮೀ ದೂರದಲ್ಲಿದೆ.

ತಮ್ಮ ಗ್ರಾಮ ಪಂಚಾಯಿತಿಯ ಜನರು ದಿನ ಬೆಳಗೆದ್ದರೆ ನೀರಿಗಾಗಿ ಪರಿಪಾಟಲು ಪಡುತ್ತಿರುವುದನ್ನು ಕಂಡ ಗ್ರಾಮ ಪಂಚಾಯಿತಿ ಸದಸ್ಯೆ ನಳಿನಾ ಅವರು ಜಲಜೀವನ್ಮಿಷನ್ ಯೋಜನೆ ಅನುಷ್ಠಾನಕ್ಕಾಗಿ ಬೆಂಬಲವಾಗಿ ಸರ್ಕಾರದಿಂದ ಯಾವುದೇ ಕಾರ್ಯಕ್ರಮ ಬಂದರೂ ಅದನ್ನು ಉಪಯೋಗಿಸಿಕೊಂಡರು. ಜನರಲ್ಲಿ ಅರಿವುಮೂಡಿಸಿ ನಿಯಮಿತವಾಗಿ ನೀರಿನ ತೆರಿಗೆಯನ್ನು ಸಂಗ್ರಹಿಸುವ ವ್ಯವಸ್ಥೆ ಕಲ್ಪಿಸಿದರು. ನೀರು ಪೋಲು ಮಾಡದಂತೆ ಗ್ರಾಮದ ಜನರಲ್ಲಿ ಅರಿವು ಮೂಡಿಸಲು ಹಲವು ಕಾರ್ಯಕ್ರಮಗಳನ್ನು ಆಯೋಜಿಸಿದರು. ಜೊತೆಗೆ ನೀರುಘಂಟಿಗಳಿಗೆ ತರಬೇತಿ ಕೊಡಿಸಿದರು. ಗ್ರಾಮದಲ್ಲಿ ಪೈಪ್ಲೈನ್ ದುರಸ್ಥಿ, ಸೋರಿಕೆ ಕಂಡು ಬಂದಲ್ಲಿ ತಕ್ಷಣ ಇಲಾಖೆಯ ಗಮನಕ್ಕೆ ತಂದು ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳುವ ಸಾರಥ್ಯವನ್ನು ಗ್ರಾಮ ಪಂಚಾಯಿತಿ ಸದಸ್ಯೆ ನಳಿನಾ ವಹಿಸಿಕೊಂಡರು.

ಜೆಜೆಎಂ ಯೋಜನೆಯಡಿ ಸಮರ್ಪಕವಾಗಿ ಕಾರ್ಯರೂಪಕ್ಕೆ ಬರುವುದಕ್ಕಾಗಿ ನಳಿನಾ ಪ್ರತಿನಿತ್ಯ ಗ್ರಾಮದ ನೀರಿನ ಸಮಸ್ಯೆಗಳನ್ನು ಪರಿಶೀಲನೆ ನಡೆಸಿದರು. ಮನೆ ಮನೆಗೂ ಕಾರ್ಯಾತ್ಮಕ ಗೃಹನಳ ಸಂಪರ್ಕ ಒದಗಿಸಿದರು. ಅಲ್ಲದೇ ಇಲಾಖೆಯ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವುದರ ಜೊತೆ ನೀರಿನ ಸಂರಕ್ಷಣೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ. ಹೀಗೆ ಕಿನಕಳ್ಳಿ ಗ್ರಾಮವನ್ನು ಹರ್ ಘರ್ ಜಲ್ ಗ್ರಾಮವೆಂದು ಘೋಷಿಸುವಲ್ಲಿ ನಳಿನಾ ಅವರ ಪಾತ್ರ ಮಹತ್ವದ್ದಾಗಿದೆ.

ಇವರ ಈ ಸಾಧನೆಗಾಗಿ ಉತ್ತರ ಪ್ರದೇಶದ ಲಕ್ನೋದಲ್ಲಿ ನಡೆದ ಸ್ವಚ್ಛ ಭಾರತ್ ಮಿಷನ್-ಗ್ರಾಮೀಣ ಮತ್ತು ರಾಷ್ಟ್ರೀಯ ಜಲ ಜೀವನ್ ಮಿಷನ್ ಕುರಿತ ರಾಷ್ಟ್ರೀಯ ಸಮ್ಮೇಳನಕ್ಕೆ ನಳಿನಾ ಅವರನ್ನು ಆಹ್ವಾನಿಸಲಾಗಿತ್ತು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯೆ ಶ್ರೀಮತಿ ನಳಿನಾ ಭಾಗವಹಿಸಿ ಜೆಜೆಎಂ ಅನುಷ್ಠಾನ ಯಶಸ್ಸಿನ ಕುರಿತು ಅನುಭವ ಹಂಚಿಕೊಂಡಿದ್ದಾರೆ. ಈ ವೇಳೆ ಇವರ ಮಹೋನ್ನತ್ತ ಕಾರ್ಯಕ್ಕೆ ಪ್ರಶಂಸೆ ವ್ಯಕ್ತವಾಗಿದೆ.

ಕಿನಕನಹಳ್ಳಿ ಗ್ರಾಮದಲ್ಲಿ ಜೆಜೆಎಂ ಯೋಜನೆಯು ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಲು

